ಪದಬಂಧ



ಎಡದಿಂದ ಬಲಕ್ಕೆ
1. ಸಮಾನತೆಯ ಸುಳಿವು ಸಿಕ್ಕೊಡನೆ ಬೆಂಬಲ ಕೊಡು (4)
3. ಕಾಡಿನ ಬಿಂಬವನ್ನು ಅಲ್ಲೇ ತೋರಿಸಬಲ್ಲ ಸಾಧನ (3)
4. ಮಾರು ದೂರದಿಂದಲೇ ತಿಳಿದೀತು , ಅದು ತುಂಬ ಸಿಹಿ (3)
6. ಪಕ್ಷ ಬದಲಿಸುವ ಕೆಲಸ ಮಾಡಿ ಮಾಡಿಯೇ ನೂರು ಸಾವಿರದ ಒಡೆಯನಾದ (4)
7. ಆತನ ಅಣ್ಣನ ಮಾತಿನಲ್ಲೇ ಒಂದು ಆಜ್ಞೆಯೂ ಸೇರಿದೆ (3)
9. ನಸು ನಸುವೇ ಇರಲಿ, ಒಟ್ಟಾರೆ ನೀರಲ್ಲಿ ತೋಯುವಂತೆ ಮಾಡು (3)
11. ಗುರುತಿಸುವುದು ಕಷ್ಟವೇನು?ಇದು ಬರೀ ಒಣ ಎಲೆ ಅಷ್ಟೇ (3)
13. ಕೆಟ್ಟು ಹೋಯಿತಲ್ಲ, ಸುಂದರ ಜಲಾಶಯ (3)
15. ಬಹುವಾಗಿ ಹಂಬಲಿಸಿ ಗಳಿಸಿದ್ದು, ಈ ತೋಳಿನ ಶಕ್ತಿ (4)
17. ಹರಣ ಮಾಡಲು ಬಂದವನು ಬಿಟ್ಟು ಹೋದದ್ದೇನು? (3)
18. ಸಮೀಕ್ಷೆ ತಪ್ಪಾಗಿ ನಡೆದದ್ದನ್ನು ಮನ್ನಿಸಿಬಿಡು (3)
19. ದುರ್ಗುಣ ತೋರಿಸದಂತಿರುವುದು ಒಳ್ಳೆಯ ಸ್ವಭಾವವೇ ತಾನೇ?(4)

ಮೇಲಿಂದ ಕೆಳಕ್ಕೆ
1. ಸೊಂಡಿಲಿನಂತೆ ಕಟ್ಟಿದ್ದು ಸ್ವಲ್ಪವೂ ಬಿಗಿ ಇಲ್ಲ (3)
2. ಸಮ್ಮತಿ ನೀಡಿದಾಕೆಯ ಹೆಸರಲ್ಲೇ ಒಳ್ಳೇ ಬುದ್ಧಿ ಇದೆ (3)
3. ಕೊಟ್ಟ ಹಣ ಹಿಂಪಡೆಯುವುದು ಬಹಳ ಕಷ್ಟ ಹೌದು (3)
5. ನೆರವು ನೀಡಲೆಂದು ಬಂದ ವಸ್ತುಗಳ ಸಾಗಣೆ ಮುಗಿಯಿತೇ? (3)
7. ಅಲ್ಲಿ ಇಲ್ಲಿ ಸುತ್ತಿ ಬಂದವರ ಕತೆ ಕೇಳಿಸಿಕೋ(3)
8. ಗುರುತಿಲ್ಲದ ಊರಲ್ಲಿ ಸುಮ್ಮನೇ ಸುತ್ತುವುದಷ್ಟೇ ತಾನೇ?(3)
9. ತಗ್ಗಿನ ನೆಲ ಸಿಕ್ಕಾಗಲೆಲ್ಲ ಇದೇನು ಜಗಿತ ? (3)
10. ತಲೆ ಕೆಳಗಾದರೂ ಸರಿ , ಬೇರೆಡೆಗೆ ಹೋಗುವಂತೆ ಮಾಡು (3)
12. ರುದ್ರ ರೂಪಿಯ ಮೈಯಲ್ಲೂ ನೆತ್ತರು ಬೇರೆ ಏನಲ್ಲ (3)
14. ಆತ ಕಟ್ಟಿಸುತ್ತಿರುವುದು ಚಿತ್ರ ಮಂದಿರ ಹೌದೇ?(3)
15. ಸುಬ್ಬಣ್ಣನ ಸ್ನೇಹಿತ ಒಳ್ಳೇ ಅಡಿಗೆಯವ (3)
16. ಕ್ಷಣದಲ್ಲೇ ಬದಲಾಯಿತು ಚಹರೆ, ಗುರುತು (3)

## 7-1-16 ರ ಉತ್ತರಗಳು

ಎಡದಿಂದ ಬಲಕ್ಕೆ:
1. ಚರಿತೆ 3. ಹೊಸತು 4. ಪತಾಕೆ 6. ಅವಾಂತರ 7. ಪಾಳುನೆಲ
9. ಕಸರತ್ತು 11. ಅಸಮ್ಮತ 15. ತಳಿರು 16. ರುಮಾಲು
17. ಹುರುಳು

ಮೇಲಿಂದ ಕೆಳಕ್ಕೆ:
1. ಚತುರ 2. ತೆಪರ 3. ಹೊಡೆತ 5. ಕೆರಳು 6. ಅಳ್ಳಕ 8. ಲಲಿತ
10. ರಜತ 12. ಸವಾಲು 13. ಅರುಹು 14. ಮರುಳು

## ಪ್ರಶ್ನಾಂಕಣ

# ಗೊರಿಲ್ಲ: ಎಷ್ಟು ವಿಧ- ಪ್ರಭೇದ?

**ಗೊ**ರಿಲ್ಲ – ಅದೊಂದು ವಾನರ. ಹಾಗೆಂದರೆ ಚಿಂಪಾಂಜಿ, ಬೋನೊಬೋ , ಒರಾಂಗೊಟಾನ್ ಮತ್ತು ಗಿಬ್ಬನ್ ಗಳ ಗುಂಪಿಗೇ ಗೊರಿಲ್ಲ ಕೂಡ ಸೇರಿದೆ. ವಿಶೇಷ ಏನೆಂದರೆ ಇಷ್ಟೂ ವಿಧ ವಾನರರಲ್ಲಿ ಗೊರಿಲ್ಲ ಗಳದೇ ಅತ್ಯಂತ ದೈತ್ಯ ದೇಹ ಗಾತ್ರ ಮತ್ತು ಭಾರೀ ಶರೀರ ಶಕ್ತಿ. ಗೊರಿಲ್ಲ ಗಳದು ಕಟ್ಟಾ ಸಸ್ಯಾಹಾರ ಕ್ರಮ; ಸೌಮ್ಯ– ಶಾಂತಿಪ್ರಿಯ ಸ್ವಭಾವ. ಇಡೀ ಜಗದಲ್ಲಿ ಗೊರಿಲ್ಲಗಳ ನೈಸರ್ಗಿಕ ವಾಸ್ತವ್ಯ ಮಧ್ಯ ಆಫ್ರಿಕದ ಕೆಲವೇ ದೇಶಗಳ ನಿಬಿಡ ಮಳೆ ಕಾಡು ಪ್ರದೇಶ ಗಳಿಗಷ್ಟೇ ಸೀಮಿತ.

ಗೊರಿಲ್ಲಗಳಲ್ಲಿ ಎರಡು ಪ್ರಭೇದಗಳನ್ನೂ, ಪ್ರತಿ ಪ್ರಭೇದದಲ್ಲೂ ಒಂದು ಉಪ ಪ್ರಭೇದವನ್ನೂ– ಹಾಗೆ ಒಟ್ಟು ನಾಲ್ಕು ಭಿನ್ನ ವಿಧಗಳನ್ನು ಗುರುತಿಸ ಲಾಗಿದೆ. ಈ ನಾಲ್ಕೂ ವಿಧಗಳ ಪ್ರಮುಖ ವೈಶಿಷ್ಟ್ಯ – ವ್ಯತ್ಯಾಸಗಳ ಸಂಕ್ಷಿಪ್ತ ವಿವರ :

1. ಈಸ್ಟರ್ನ್ ಲೋ ಲ್ಯಾಂಡ್ ಗೊರಿಲ್ಲ: ಮಧ್ಯ ಆಫ್ರಿಕಾದ ಪೂರ್ವ ಭಾಗದಲ್ಲಿರುವ ಕಾಂಗೋ , ಉಗಾಂಡಾ ಮತ್ತು ರುವಾಂಡಾ ದೇಶಗಳ ವೃಷ್ಟಿ ವನಗಳಲ್ಲಿರುವ ಈ ಗೊರಿಲ್ಲ ವಿಧದ್ದೇ ಅತ್ಯಂತ ದೈತ್ಯ ದೇಹ ಗಾತ್ರ – ತೂಕ (ಚಿತ್ರ 2), ದಟ್ಟ ಕಪ್ಪು ಬಣ್ಣದ ಶರೀರ. ಸದ್ಯದಲ್ಲಿ ಉಳಿದಿರುವ ಈ ವಿಧದ ಗೊರಿಲ್ಲ ಗಳ ಒಟ್ಟು ಸಂಖ್ಯೆ ಐದು ಸಾವಿರ ಮೀರಿಲ್ಲ .

2. ಮೌಂಟೇನ್ ಗೊರಿಲ್ಲ: ಈಸ್ಟರ್ನ್ ಲೋಲ್ಯಾಂಡ್ ಗೊರಿಲ್ಲದ ಉಪ ಪ್ರಭೇದ. ಅದೇ ಪ್ರದೇಶಗಳಲ್ಲೇ, ಅಲ್ಲಿ ಹಬ್ಬಿರುವ 'ವಿರುಂಗಾ' ಪರ್ವತ ಸಾಲನ್ನು ಆಧರಿಸಿರುವ ದಟ್ಟ ಮಳೆ ಕಾಡಿನಲ್ಲಿ ಇವುಗಳ ನೆಲೆ – ಹಾಗಾಗಿಯೇ ಈ ಹೆಸರು. ಉನ್ನತ ಪರ್ವತ ಪ್ರದೇಶಗಳಲ್ಲಿನ ಮೇಘಾರಣ್ಯದ ತೀವ್ರ ಶೀತ – ಚಳಿಯ ಪರಿಸ್ಥಿತಿಗಳನ್ನು ಸಹಿಸಲೆಂದು ಗಾಢ ಕಪ್ಪಿನ ಉದ್ದುದ್ದನೆಯ ದಟ್ಟ ಹೊದಿಕೆ ( ಚಿತ್ರ 1). ಒಟ್ಟು ಜನಸಂಖ್ಯೆ ಕೇವಲ ಏಳು ನೂರು ! ಕ್ಷಿಪ್ರದಲ್ಲೇ




ಅಳಿದು ಹೋಗುವ ದುಃಸ್ಥಿತಿ .

3. ವೆಸ್ಟರ್ನ್ ಲೋಲ್ಯಾಂಡ್ ಗೊರಿಲ್ಲ : ಮಧ್ಯ ಆಫ್ರಿಕಾದ ಪಶ್ಚಿಮ ಭಾಗದಲ್ಲಿರುವ ಕ್ಯಾಮರೂನ್, ನೈಜೀರಿಯಾ, ಗಿನಿ, ಗೆಬಾನ್ ಮತ್ತು ಅಂಗೋಲಾ ದೇಶಗಳಲ್ಲಿನ ಮಳೆ ಕಾಡುಗಳಲ್ಲಿ ನೆಲೆಸಿರುವ ಈ ವಿಧ ಗೊರಿಲ್ಲ ಗಳದೇ ಗರಿಷ್ಠ ಸಂಖ್ಯೆ. ಕಂದು ಬಣ್ಣದ ಶರೀರದ ಈ ವಾನರರ ಒಟ್ಟು ಸಂಖ್ಯೆ ಸುಮಾರು ಒಂದೂವರೆ ಲಕ್ಷ .

4. ಕ್ರಾಸ್ ರಿವರ್ ಗೊರಿಲ್ಲ: ಮಧ್ಯ ಆಫ್ರಿಕದ ಪಶ್ಚಿಮದ ನೈಜೀರಿಯಾ ಮತ್ತು ಕ್ಯಾಮರೂನ್ ಗಳ ವೃಷ್ಟಿ ವನಗಳಲ್ಲಿನ ಕೆಲವೇ ಪ್ರದೇಶಗಳಿಗೆ ಸೀಮಿತವಾಗಿರುವ ಈ ಬಗೆಯ ಗೊರಿಲ್ಲ ಗಳದೇ ಅತ್ಯಂತ ಕಡಿಮೆ ಸಂಖ್ಯೆ . ಕೇವಲ ಮುನ್ನೂರರಷ್ಟೇ ಇರುವ ಈ ಉಪಪ್ರಭೇದದ್ದು ಈ ದಶಕದೊಳಗೇ ನಿರ್ನಾಮವಾಗುವ ಪರಿಸ್ಥಿತಿ.

ಬಡ ರಾಷ್ಟ್ರಗಳ ಅಡವಿ ಮಡಿಲಲ್ಲಿ ನೆಲೆಸಿರುವ ಎಲ್ಲ ಗೊರಿಲ್ಲ ವಿಧಗಳೂ ಅಪಾಯದ ಭಯದಲ್ಲಿವೆ. ವೇಗದ ಅರಣ್ಯ ನಾಶ ಮತ್ತು ವನ್ಯ ಮಾಂಸದ ದಂಧೆಗೆ ಬಲಿಯಾಗುತ್ತ, ಅಲ್ಪ ಸಂಖ್ಯಾತವಾಗುತ್ತ ಅಳಿವ ಅಂಚನ್ನು ತಲುಪಿವೆ.

■ ಎನ್. ವಾಸುದೇವ್